ಇಲಾಖೆ / ವಿಷಯ: DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER :

ದಿನಾಂಕ : DATE : 11/10/2019

# ನೂರಾರು ಕೋಟಿ ರೂ. ಆದಾಯ ಖೋತಾ: ಸಿಎಜಿ ವರದಿಯಲ್ಲಿ ಬಹಿರಂಗ

ವಿಧಾನಸಭೆ: ರಾಜ್ಯ ಸರ್ಕಾರದ ಪ್ರಮುಖ ಆದಾಯ ಮೂಲಗಳಾದ ವಾಣಿಜ್ಯ ತೆರಿಗೆಗಳ ಇಲಾಖೆ, ಮುದ್ರಾಂಕ ಮತ್ತು ನೋಂದಣಿ ಇಲಾಖೆ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆಯಡಿ 2017-18ನೇ ಸಾಲಿನಲ್ಲಿ ರಾಜಸ್ವಕ್ಕೆ ಸಂಬಂಧಪಟ್ಟಂತೆ ಮಹಾಲೇಖ ಪಾಲರ ವರದಿ ಗುರುವಾರ ಮಂಡನೆಯಾಗಿದ್ದು, ನೂರಾರು ಕೋಟಿ ರೂ. ಆದಾಯ ಖೋತಾ ಆಗಿರುವುದು ಬಯಲಾಗಿದೆ.

ಪ್ರಮುಖವಾಗಿ ಮದ್ಯ ಮಾರಾಟದ ಮೇಲೆ ತೆರಿಗೆಯನ್ನು ಕಡಿಮೆ ಪ್ರಮಾಣದಲ್ಲಿ ವಿಧಿರುವುದು, ಲೆಕ್ಕ ಪರಿಶೋಧನೆಗೆ ಒಳಪಟ್ಟ ಲೆಕ್ಕಪತ್ರಗಳಲ್ಲಿ ಘೋಷಿಸಲಾಗಿದ್ದ ವ್ಯತ್ಯಾಸದ ತೆರಿಗೆ ಪಾವತಿಸದಿರುವುದು, ಕಾಮಗಾರಿ ಗುತ್ತಿಗೆದಾರರಿಗೆ ಸಂಬಂಧಿಸಿದಂತೆ ತೆರಿಗೆ ಕಡಿಮೆ ಪ್ರಮಾಣದಲ್ಲಿ ವಿಧಿಸಿರುವುದು, ಖರೀದಿಗಳ ಮೇಲಿನ ತೆರಿಗೆ ಜಮೆಯ ರೂಪದಲ್ಲಿ ಆದಾಯ ನಷ್ಟವಾಗಿರುವ ಬಗ್ಗೆ ವರದಿಯಲ್ಲಿ ವಿವರವಾಗಿ ತಿಳಿಸಲಾಗಿದೆ.

ಈ ನಡುವೆ ಲೆಕ್ಕಪರಿಶೋಧನೆಗೆ ಕಡತಗಳನ್ನು ಸಲ್ಲಿಸದಿರುವುದನ್ನೂ ವರದಿಯಲ್ಲಿ ಉಲ್ಲೇಖಿಸಲಾಗಿದೆ. 2017-18ನೇ ಸಾಲಿನಲ್ಲಿ ಹಣಕಾಸು, ಕಂದಾಯ, ಸಾರಿಗೆ, ವಾಣಿಜ್ಯ ಮತ್ತು ಕೈಗಾರಿಕೆ ಹಾಗೂ ಇಂಧನ ಇಲಾಖೆಗಳ 386 ಕಚೇರಿಗಳ ಪೈಕಿ ಹಣಕಾಸು, ಕಂದಾಯ ಇಲಾಖೆ ಅಡಿಯಲ್ಲಿ ಹಲವು ಕಚೇರಿಗಳಲ್ಲಿ ಲೆಕ್ಕಪರಿಶೋಧನೆಗಾಗಿ 35 ದಾಖಲೆ ಒದಗಿಸಿಲ್ಲ, ಇದರಿಂದಾಗಿ ಕರ ನಿರ್ಧಾರಣೆ ಹಾಗೂ ವಿಧಿಸಲಾದಂತಹ ತೆರಿಗೆಗಳು ಅಥವಾ ವಸೂಲಾತಿ ಸಂಗ್ರಹವಾದಂತಹ ವರಮಾನದ ಬಗ್ಗೆ ಖಚಿತತೆ ಪಡೆಯಲಾಗಿಲ್ಲ ಎಂದು ಉಲ್ಲೇಖಿಸಲಾಗಿದೆ.

ಮಾರಾಟಗಳ ಮೇಲಿನ ತೆರಿಗೆ/ ಮೌಲ್ಯವರ್ಧಿತ ತೆರಿಗೆ, ಅಬಕಾರಿ, ಮೋಟಾರು ವಾಹನಗಳ ಮೇಲಿನ ತೆರಿಗೆಗಳು ಹಾಗೂ ಮುದ್ರಾಂಕ ಮತ್ತು ನೋಂದಣಿ ಶುಲ್ಕ, ಭೂ ಕಂದಾಯ ಮತ್ತು ಇತರ ಇಲಾಖೆ ಕಚೇರಿಗಳಲ್ಲಿ 386 ಕಚೇರಿಗಳ ದಾಖಲೆಗೆ ಸಂಬಂಧಪಟ್ಟಂತೆ ಪರೀಕ್ಷಾ ಪರಿಶೀಲನೆಯಲ್ಲಿ 750.43 ಕೋಟಿ ರೂ.ನಷ್ಟು ಒಟ್ಟು ರಾಜಸ್ವವನ್ನು (ವರಮಾನ) ಕಡಿಮೆ ಪ್ರಮಾಣದಲ್ಲಿ ವಿಧಿಸಿ ನಷ್ಟ ಉಂಟಾಗಿರುವುದನ್ನು ಪತ್ತೆ ಹಚ್ಚಿದೆ.

ಇನ್ನು ಮುದ್ರಾಂಕ ಮತ್ತು ನೋಂದಣಿ ಇಲಾಖೆಗೆ ಸಂಬಂಧಪಟ್ಟಂತೆ ಆಸ್ತಿ ಮೌಲ್ಯಮಾಪನ ಲೋಪ ಸೇರಿದಂತೆ ನಾನಾ ದೋಷಗಳಿಂದಾಗಿ 439 ಕೋಟಿ ರೂ. ಆದಾಯ ನಷ್ಟವಾಗಿರುವುದು ಬಯಲಾಗಿದೆ.

3,335 ಪ್ರಕರಣಗಳಲ್ಲಿ ಮಾರಾಟ ಪತ್ರಗಳನ್ನು ಪರಿಶೀಲಿಸಿದಾಗ 2,232 ಕೋಟಿ ರೂ. ಮೊತ್ತವನ್ನು ಮರೆಮಾಚಿದ್ದು, ಇದರಿಂದ 149 ಕೋಟಿ ರೂ. ನಷ್ಟ ಉಂಟಾಗಿದೆ ಎಂದು ವರದಿಯಲ್ಲಿ ತಿಳಿಸಿದೆ. ಮಾರ್ಗಸೂಚಿ ಮಾರುಕಟ್ಟೆ ಮೌಲ್ಯದ ಅಂದಾಜಿನಲ್ಲೂ ತಪ್ಪುಗಳಾಗಿವೆ. ಅಭಿವೃದ್ಧಿಪಡಿಸಲಾದ ಭೂಮಿಗೆ ಅದೇ ಗ್ರಾಮ (ಪ್ರದೇಶ)ದ ಅಭಿವೃದ್ಧಿಪಡಿಸಿದರ ಭೂಮಿಗಿಂತ ಕಡಿಮೆ ಪ್ರಮಾಣದಲ್ಲಿ ಮೌಲ್ಯಮಾಪನಕ್ಕೆ ಅವಕಾಶ ಎಡೆ ಮಾಡಿಕೊಟ್ಟಂತಿದೆ. ಇದರಿಂದಾಗಿ 13,533 ಪ್ರಕರಣಗಳಲ್ಲಿ ನಿವೇಶನ/ ಅಪಾರ್ಟ್‌ಮೆಂಟ್‌ಗಳ ಮೌಲ್ಯ ಕಡಿಮೆಯಾಗಿ 3,167ರ ಕೋಟಿ ರೂ.ಗೆ ಇಳಿಕೆಯಾಗಿತ್ತು. ಇದರಿಂದಾಗಿ 189 ಕೋಟಿ ರೂ. ನಷ್ಟ ಉಂಟಾಗಿದೆ. ನಿಯಮಬಾಹಿರವಾಗಿ 535 ಪ್ರಕರಣ ಸೇರಿದಂತೆ ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕದಲ್ಲಿ 25.54 ಕೋಟಿ ರೂ. ನಷ್ಟವಾಗಿದೆ. ಹೀಗೆ ಹಲವು ರೀತಿಯಲ್ಲಿ ಸುಮಾರು 439 ಕೋಟಿ ರೂ. ನಷ್ಟ ಉಂಟಾಗಿರುವ ಬಗ್ಗೆಯೂ ವರದಿಯಲ್ಲಿ ಉಲ್ಲೇಖಿಸಲಾಗಿದೆ.

**ಶಿಫಾರಸುಗಳು:** ■ ರಾಜ್ಯದ ಆಸ್ತಿಗಳ ಮೌಲ್ಯ ಬೆಲೆ ಸೂಚ್ಯಂಕದ ಒಂದು ವ್ಯವಸ್ಥೆ ಸ್ಥಾಪಿಸುವುದು ಹಾಗೂ ತ್ರೈಮಾಸಿಕ ಅಥವಾ ಅರ್ಧ ವಾರ್ಷಿಕ ಅವಧಿಗಾಗಿ ಸೂಚ್ಯಂಕ ಅಂಶದ ಆಧಾರದ ಮೇರೆಗೆ ಮಾರ್ಗಸೂಚಿ ಮಾರುಕಟ್ಟೆ ಮೌಲ್ಯವನ್ನು ಇಂದಿನ ದಿನದಂತೆ ಮಾಡುವುದನ್ನು ಸರ್ಕಾರ ಪರಿಗಣಿಸಬೇಕು.

■ ಉಪನೋಂದಣಿ ಅಧಿಕಾರಿಗಳು ನೋಂದಣಿ ಪ್ರಾರಂಭಿಸುವ ಮೊದಲು ಮಾರ್ಗಸೂಚಿ ಮಾರುಕಟ್ಟೆ ಮೌಲ್ಯಗಳನ್ನು ಇಂದಿನ ದಿನವನ್ನಾಗಿ ಮಾಡುವ ಹಾಗೂ ಅಧಿಸೂಚನೆ ಹೊರಡಿಸುವ ರೀತಿಯಲ್ಲಿ ಸಂಭಾವ್ಯ ಹೊಸ ಯೋಜನೆಗಳನ್ನು ಗುರುತಿಸಬೇಕು. ಅಂತಹ ಯೋಜನೆಗಳ ವಿವಿಧ ಹಂತಗಳ ಬಗ್ಗೆ ಮಾಹಿತಿ ಖಚಿತಪಡಿಸಿಕೊಳ್ಳಲು 'ಕಾವೇರಿ' ತಂತ್ರಾಂಶದ ದತ್ತಾಂಶವನ್ನು ನಿಯಮಿತವಾಗಿ ವಿಶ್ಲೇಷಿಸಬೇಕು. ಹೊಸ ಯೋಜನೆಗಳು ಪ್ರಾರಂಭಿಕ ಮೌಲ್ಯಮಾಪನದ ಅಗತ್ಯತೆಯನ್ನು ಹೊಂದಿಸುವುದರಿಂದ ಮೌಲ್ಯಸೂಚ್ಯಂಕ ವ್ಯವಸ್ಥೆಯನ್ನು ಪ್ರಾರಂಭಿಸಿದರೂ ಅವುಗಳನ್ನು ಅನುರಿಸುವ ರೀತಿಯಲ್ಲಿ ಹೊಸ ಯೋಜನೆಗಳಿಗೆ ಮೌಲ್ಯಗಳನ್ನು ಅಂದಾಜು ಮಾಡಿ ಅಧಿಸೂಚನೆ ಹೊರಡಿಸುವ ವ್ಯವಸ್ಥೆ ತರಬಹುದು.

**ಖನಿಜ ಸ್ವೀಕೃತಿಯಲ್ಲೂ ನಷ್ಟ:** ಖನಿಜಗಳ ಸ್ವೀಕೃತಿ ಕುರಿತಂತೆಯೂ ಮಹಾಲೇಖಪಾಲರು ಮೌಲ್ಯಮಾಪನ ನಡೆಸಿದ್ದು, ಸಾಕಷ್ಟು ಲೋಪದೋಷಗಳಿಂದ ಸರ್ಕಾರಕ್ಕೆ ಅಪಾರ ಪ್ರಮಾಣದಲ್ಲಿ ನಷ್ಟ ಉಂಟಾಗಿರುವುದನ್ನು ಬಯಲಿಗೆಳೆದಿದೆ. 134.68 ಕೋಟಿ ರೂ. ಮೊತ್ತದ ಖನಿಜ ರವಾನೆ ಪರವಾನಗಿಯನ್ನು ಪಡೆದುಕೊಳ್ಳದೆಯೇ ಪ್ರಧಾನವಲ್ಲದ ಖನಿಜಗಳ ರವಾನೆಗಾಗಿ ದಂಡ, ರಾಜಧನ ವಿಧಿಸದಿರುವ 13 ಪ್ರಕರಣಗಳನ್ನು ಪತ್ತೆ ಹಚ್ಚಿದೆ. ರಾಜ್ಯದ 29,800 ಚ.ಮೀ. ಪ್ರದೇಶದಲ್ಲಿ ಗಣಿಗಾರಿಕೆ ಕೈಗೊಂಡಿದ್ದ 52 ಕಂಪನಿಗಳ ಗುತ್ತಿಗೆ ಅವಧಿ ಮುಕ್ತಾಯವಾಗಿದ್ದರೂ ಗಣಿಗಾರಿಕೆ ಮುಂದುವರಿದಿದೆ. 46,000 ಚ.ಮೀ. ಪ್ರದೇಶದಲ್ಲಿ 33 ಪ್ರಧಾನವಲ್ಲದ ಖನಿಜಗಳ ಗಣಿಗಳಲ್ಲಿ ಅವುಗಳ ವ್ಯಾಪ್ತಿ ಮೀರಿ ಹೊರ ಪ್ರದೇಶಗಳಲ್ಲಿ ಗಣಿಗಾರಿಕೆ ನಡೆಸಲಾಗಿದೆ. ರಾಜಧನ ಹಾಗೂ ದಂಡ ಒಳಗೊಂಡಂತೆ 191.96 ಕೋಟಿ ರೂ. ನಷ್ಟ ಉಂಟಾಗಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

## ಮಾರ್ಗಸೂಚಿ ದರ ಪರಿಷ್ಕರಣೆಗೆ ಸಲಹೆ

ಮುದ್ರಾಂಕ ಮತ್ತು ನೋಂದಣಿ ಇಲಾಖೆಯು ಮಾರ್ಗಸೂಚಿ ಮಾರುಕಟ್ಟೆ ಮೌಲ್ಯಗಳ ವಾರ್ಷಿಕ ಪರಿಷ್ಕರಣೆ ವಿಧಾನದ ಕಾರ್ಯಸಾಧ್ಯತೆ ಬಗ್ಗೆ ಪುನರ್ ಅವಲೋಕಿಸಬೇಕಾದ ಅಗತ್ಯವಿದೆ. ಕೇಂದ್ರ ಮೌಲ್ಯಮಾಪನ ಸಮಿತಿಯು ಎಲ್ಲ ಮೂಲಗಳಿಂದ ಮಾಹಿತಿ ಸಂಗ್ರಹಿಸಿ ಚರ್ಚಿಸಬೇಕು. ಮೌಲ್ಯಮಾಪನಕ್ಕೆ ಸಂಬಂಧಪಟ್ಟಂತೆ ಎಲ್ಲ ಅಂಶಗಳನ್ನು ಪರಿಗಣಿಸಿ ಮೌಲ್ಯಗಳನ್ನು ಅಂತಿಮ ರೂಪಕ್ಕೆ ತರುವ ರೀತಿಯಲ್ಲಿ ಮೂರು ಅಥವಾ ಐದು ವರ್ಷಕ್ಕೊಮ್ಮೆ ಹೆಚ್ಚಳ ಮಾಡುವುದನ್ನು ಪರಿಗಣಿಸಬೇಕು ಎಂದು ಮಹಾಲೇಖಪಾಲರ ವರದಿಯಲ್ಲಿ ಸಲಹೆ ನೀಡಲಾಗಿದೆ.